# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org


ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2018-19/ cys 33 ದಿನಾಂಕ:31.05.2018

01/06/18

## ಸಭೆಯ ನಡಾವಳಿಗಳು

ದಿನಾಂಕ 21.05.2018 ರಂದು ಚಾಮರಾಜನಗರ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀಎನ್ ಶ್ರೀನಿವಾಸಮೂರ್ತಿ : ಅಧೀಕ್ಷಕ ಇಂಜಿನಿಯರ್ (ವಿ), ಚಾಮರಾಜನಗರ ಮತ್ತು ಕೊಡಗು ವೃತ್ತ.
2. ಶ್ರೀಮತಿ ಎನ್. ತಾರಾ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಚಾಮರಾಜನಗರ ಮತ್ತು ಕೊಡಗು ವೃತ್ತ.
3. ಶ್ರೀ.ರಮೇಶ್.ಹೆಚ್.ಕೆ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಚಾಮರಾಜನಗರ ವಿಭಾಗ.
4. ಶ್ರೀ.ರಾಜು.ಎಂ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾಮರಾಜನಗರ ಉಪವಿಭಾಗ.
5. ಶ್ರೀ. ಭಾಸ್ಕರ್ : ಲೆಕ್ಕಾಧಿಕಾರಿ, ಚಾಮರಾಜನಗರ ವಿಭಾಗ.
6. ಶ್ರೀ. ಬೆಳ್ಳಯ್ಯ : ಲೆಕ್ಕಾಧಿಕಾರಿಗಳು (ಆ.ಲೆ.ಪ) ವಿಭಾಗೀಯ ಕಛೇರಿ ಚಾ.ನಗರ
7. ಶ್ರೀಮಹೇಶ್, ಎನ್ : ಸಹಾಯಕ ಲೆಕ್ಕಾಧಿಕಾರಿಗಳು ವಿಭಾಗೀಯ ಕಛೇರಿ ಚಾಮರಾಜನಗರ
8. ಶ್ರೀ.ಸಂಪತ್, ಎಸ : ಸಹಾಯಕ ಇಂಜಿನಿಯರ್(ವಿ), ಚಾಮರಾಜನಗರ ಶಾಖೆ.
9. ಶ್ರೀ ಮಂಜುನಾಥ್ : ಕಿರಿಯ ಇಂಜಿನಿಯರ್(ವಿ)ರಾಮಸಮುದ್ರ ಶಾಖೆ.
10. ಶ್ರೀ ಉಮೇಶ್ : ಪ್ರಭಾರ ಕಿರಿಯ ಇಂಜಿನಿಯರ್(ವಿ) ಬದನಗುಪ್ಪೆ ಶಾಖೆ.
11. ಶ್ರೀ ಶಿವಕುಮಾರ್ : ಪ್ರಭಾರ ಕಿರಿಯ ಇಂಜಿನಿಯರ್(ವಿ) ಮಾದಪುರ ಶಾಖೆ

Comml EE(RA) 4/6/2018

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಾದ ಎಲ್ಲರನ್ನು ಸ್ವಾಗತಿಸಿ ಮಾನ್ಯ ಅಧೀಕ್ಷಕ ಇಂಜಿನಿಯರ್ (ವಿ) ರವರಿಗೆ ಸಭೆಯನ್ನು ನಡೆಸಿಕೊಡುವಂತೆ ಕೋರಿದರು. ಮಾನ್ಯ ಅಧೀಕ್ಷಕ ಇಂಜಿನಿಯರ್ (ವಿ) ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದಂತೆ ಎಲ್ಲಾ ಉಪವಿಭಾಗ ವ್ಯಾಪ್ತಿಯಲ್ಲಿ ಮೂರು ತಿಂಗಳಿಗೊಮ್ಮೆ ಅಧೀಕ್ಷಕ ಅಭಿಯಂತರರ ಅಧ್ಯಕ್ಷತೆಯಲ್ಲಿ ಸ್ಥಳೀಯ ಅಧಿಕಾರಿಗಳನ್ನೊಳಗೊಂಡಂತೆ ಗ್ರಾಹಕರ ಸಭೆ ಕರೆದು ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಈ ಸಭೆಯನ್ನು ನಡೆಸಲಾಗುತ್ತಿದ್ದು ವಿದ್ಯುತ್ ಸರಬರಾಜು, ನಿರ್ವಹಣೆ ಹಾಗು ಇನ್ನಿತರೆ ಸಮಸ್ಯೆಗಳ ಬಗ್ಗೆ ತಮ್ಮ ಅಹವಾಲುಗಳನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಸಭೆಗೆ ಮಂಡಿಸುವಂತೆ ಕೋರಿದರು ಹಾಗು ಸದರಿ ಸಮಸ್ಯೆಗಳಿಗೆ ಆದ್ಯತೆ ಮೇಲೆ ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

ಚಾ.ವಿ.ಸ.ನಿ. ನಿಗಮ ಕಾರ್ಯಾಲಯ, ಮೈಸೂರು
ಸಂ. 925
ತಾ. 4/6/18

Scanned by CamScanner

| ಕ್ರಮ ಸಂಖ್ಯೆ | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1. | ಶ್ರೀ.ಬಸವಣ್ಣ<br>ನಲ್ಲೂರು ಗ್ರಾಮ<br>ಸಂತೇಮರಳ್ಳಿ ಉಪವಿಭಾಗ<br>ಚಾಮರಾಜನಗರ | *ನಲ್ಲೂರು ಗ್ರಾಮದ ಜಮೀನಿನ ಹತ್ತಿರ ಇರುವ 100ಕೆವಿಎ ಫಾರೆಸ್ಟ್ ಪರಿವರ್ತಕವು ಸುಟ್ಟುಹೋಗಿದ್ದು, ಇದರಿಂದ ಜಮೀನಿನಲ್ಲಿ ಬೆಳೆದಿರುವ ಬೆಳೆಗೆ ನೀರಿಲ್ಲದೇ ಒಣಗುತ್ತಿದ್ದು ಶೀಘ್ರವಾಗಿ ಪರಿವರ್ತಕವನ್ನು ಬದಲಾಯಿಸಿಕೊಡಲು ಕೋರಿರುತ್ತಾರೆ. | *ಅಧೀಕ್ಷಕ ಇಂಜಿನಿಯರ್(ವಿ) ರವರು ಉತ್ತರಿಸಿ ನಿಮ್ಮ ಗ್ರಾಮವು ಸಂತೇಮರಳ್ಳಿ ಉಪವಿಭಾಗದ ವ್ಯಾಪ್ತಿಗೆ ಸೇರಿದ್ದು, ಆ ಉಪವಿಭಾಗದ ಸಂಬಂಧಪಟ್ಟ ಅಧಿಕಾರಿಗೆ ಸದರಿ ಪರಿವರ್ತಕವನ್ನು ಬದಲಾಯಿಸಲು ಸೂಚಿಸುವುದಾಗಿ ತಿಳಿಸಿದರು ಮತ್ತು ಈ ದೂರನ್ನು ಸಂತೇಮರಳ್ಳಿ ಉಪವಿಭಾಗಕ್ಕೆ ವರ್ಗಾಯಿಸುವಂತೆ ಸೂಚಿಸಿದರು. |
| 2. | ಶ್ರೀ.ಎಮ್ ಎಸ್ ಮೂರ್ತಿ<br>ಮುತ್ತಿಗೆ ಗ್ರಾಮ<br>ಚಾ.ನಗರ | * ಬದನಗುಪ್ಪೆ ಶಾಖಾ ವ್ಯಾಪ್ತಿಗೆ ಬರುವ ಮುತ್ತಿಗೆ ಗ್ರಾಮದ ಜಮೀನಿನ ಹತ್ತಿರ ಇರುವ 63ಕೆವಿಎ ಮೂರ್ತಿ ಪರಿವರ್ತಕವು ಸುಟ್ಟುಹೋಗಿದ್ದು , ಜಮೀನಿನಲ್ಲಿ ಬೆಳೆಗೆ ತೊಂದರೆಯಾಗಿರುತ್ತದೆ. ಆದ್ದರಿಂದ ಶೀಘ್ರವಾಗಿ ಸುಟ್ಟುಹೋದ ಪರಿವರ್ತಕವನ್ನು ಬದಲಾಯಿಸಿಕೊಡಲು ಕೋರಿರುತ್ತಾರೆ. | *ಅಧೀಕ್ಷಕ ಇಂಜಿನಿಯರ್(ವಿ) ರವರು ಉತ್ತರಿಸಿ ಕೂಡಲೇ ಸದರಿ ಪರಿವರ್ತಕವನ್ನು ಬದಲಾಯಿಸಲು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸೂಚಿಸಿದರು ಅದರಂತೆಯೇ ದಿ: 21-05-2018 ರಂದು ಬದನಗುಪ್ಪೆ ಶಾಖಾಧಿಕಾರಿಗಳು ಸದರಿ ಪರಿವರ್ತಕವನ್ನು ಬದಲಾಯಿಸಿರುತ್ತಾರೆ. |
| 3. | ಶ್ರೀ.ಮಧುಕೇಶ್ವರ್<br>ವರ್ತಕರ ಭವನ ಹಿಂಭಾಗ<br>ರಾಮಸಮುದ್ರ. ಚಾ.ನಗರ. | * ರಾಮಸಮುದ್ರ ಶಾಖಾ ವ್ಯಾಪ್ತಿಗೆ ಬರುವ ವರ್ತಕರ ಭವನ ಹಿಂಭಾಗದ ಪ್ರದೇಶದಲ್ಲಿ ಹೊಸದಾಗಿ ಮನೆಯನ್ನು ನಿರ್ಮಿಸಿದ್ದು ಹೊಸ ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಬೇಕಿದ್ದು, ನಗರಸಭೆ ಕಛೇರಿಯಿಂದ ನಿರಪೇಕ್ಷಣಾ ಪತ್ರ ನೀಡುತ್ತಿಲ್ಲವೆಂದು ಹೇಳುತ್ತಾ, ನಿರಪೇಕ್ಷಣಾ ಪತ್ರದ ಹೊರತಾಗಿಯು ವಿದ್ಯುತ್ ಸಂಪರ್ಕ ನೀಡಬೇಕೆಂದು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಉತ್ತರಿಸಿ ಕಛೇರಿ ನಿಯಮಾನುಸಾರ ನಿರಪೇಕ್ಷಣಾ ಪತ್ರವನ್ನು ನೀಡಿಯೇ ಉಪವಿಭಾಗ ಕಛೇರಿಯಲ್ಲಿ ನೊಂದಾಯಿಸಿ ಹೊಸದಾಗಿ ವಿದ್ಯುತ್ ಸಂಪರ್ಕವನ್ನು ಪಡೆಯಬೇಕಿರುತ್ತದೆ, ಆದ್ದರಿಂದ ನಿರಪೇಕ್ಷಣಾ ಪತ್ರವನ್ನು ಸಲ್ಲಿಸಿಯೇ ವಿದ್ಯುತ್ ಸಂಪರ್ಕವನ್ನು ಪಡೆಯಬೇಕೆಂದು ತಿಳಿಸಿದರು. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆದ ಶ್ರೀ.ರಾಜು.ಎಂ ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿದರು. ಇದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು

Scanned by CamScanner

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಚಾ.ನಗರ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಚಾ.ನಗರ ಉಪವಿಭಾಗ ರವರ ಮಾಹಿತಿಗಾಗಿ.

Scanned by CamScanner